ಸದಾ ಬಾಯಲ್ಲಿ ಎಲೆಅಡಿಕೆ ಹಾಕಿಕೊಂಡು ಕಟಬಾಯಿಯಲ್ಲಿ ಒಸರುತ್ತಿದ್ದ ಕೆಂಪು ರಸವನ್ನು ಬಿಳಿ ಪಂಚೆಯ ತುದಿಯಲ್ಲಿ ಒರೆಸುತ್ತಾ ಎಣಗಪ್ಪು ಬಣ್ಣದವರಾಗಿದ್ದ ಚಿದಂಬರ ಭಟ್ಟರನ್ನು ತೆಳ್ಳಗೆ ಬೆಳ್ಳಗೆ ಉದ್ದಕ್ಕೆ ನೋಡಲು ಲಕ್ಷಣವಾಗಿಯೇ ಕಾಣಿಸುತ್ತಿದ್ದ ಸೀತಾಲಕ್ಷ್ಮಿ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಳು. ಮೊದಲ ಹೆಂಡತಿಯ ಮಕ್ಕಳು ಸೊಸೆಯಂದಿರು ಬೇರೆ ಹೋದ ನಂತರವಂತೂ ಇಡೀ ಮನೆ ಅವಳದಾಗಿ ಅಚ್ಚುಕಟ್ಟಾಗಿ ಇಟ್ಟುಕೊಂಡಿದ್ದಳು. ಮನೆಯ ಹಿಂದೆ ಮುಂದೆ ದಾಸವಾಳ, ಸೇವಂತಿಗೆ ಗಿಡಗಳನ್ನು ಬೆಳೆಸಿ ಇಡೀ ಊರವರನ್ನು ಸೆಳೆದಿದ್ದಳು. ಶಿವನ ದೇವಸ್ಥಾನಕ್ಕೆ ಹಣ್ಣು ಕಾಯಿ ಮಾಡಿಸಲು ಬರುತ್ತಿದ್ದ ಹತ್ತಿರದ ಬೇರೆ ಬೇರೆ ಊರಿನವರೂ ಸೀತಾಲಕ್ಷ್ಮಿ ಬೆಳೆಸಿದ ಗಿಡಗಳನ್ನು ನೋಡಲೆಂದೇ ಭಟ್ಟರ ಮನೆಗೂ ಭೇಟಿಕೊಟ್ಟು ಗಿಡಗಳನ್ನು ಪಡೆದು ಹೋಗುತ್ತಿದ್ದರು. ಚಿದಂಬರ ಭಟ್ಟರಿಗೆ ವಿಪರೀತ ಇಸ್ಪೀಟ್ ಆಡುವ ಚಟವೂ ಇತ್ತು. ವಾರಕ್ಕೊಮ್ಮೆ ಅವರ ಮನೆಯಲ್ಲಿ ಇಸ್ಪೀಟ್ ಮಂಡಲ ನಡೆಯುತ್ತಿದ್ದು ಆ ಸೀಮೆಯಷ್ಟೇ ಅಲ್ಲದೇ ಕೆಲವೊಮ್ಮೆ ಬೇರೆ ಸೀಮೆಗಳಿಂದಲೂ ಇಸ್ಪೀಟ್ ಆಡುವುದಕ್ಕೆ ಜನ ಬರುತ್ತಿದ್ದರು. ಸೀತಾಲಕ್ಷ್ಮಿ ಬೇಸರಿಸಿಕೊಳ್ಳದೇ ಅವರಿಗೆಲ್ಲಾ ಕಾಫಿ, ಟೀ, ಕಷಾಯಗಳನ್ನು ಸಪ್ಲೈ ಮಾಡುತ್ತಿದ್ದಳು. ಇನ್ನೊಂದು ಮದುವೆಯಾದರೆ ಅಕಾಲ ಮೃತ್ಯುವಿನಿಂದ ಬಚಾವಾಗುತ್ತಾರೆ ಎಂದು ಚಿದಂಬರ ಭಟ್ಟರ ಜಾತಕದಲ್ಲಿದ್ದುದು ನಿಜವಾಯಿತೋ ಅಥವಾ ಸೀತಾಲಕ್ಷ್ಮಿಯ ಯೋಗವೋ ಅಂತೂ ಚಿದಂಬರ ಭಟ್ಟರು ವಯಸ್ಸಾದ ನಂತರ ಎರಡನೇ ಮದುವೆಯಾಗಿ ಸುಮಾರು ವರ್ಷಗಳ ಕಾಲ ಬದುಕಿ ಎಲ್ಲರೂ ಅವರ ಎರಡನೇ ಮದುವೆ ಪ್ರಸಂಗವನ್ನು ಮರೆತೇಬಿಟ್ಟಿದ್ದರು. ಹೀಗೇ ಸಂಸಾರ ಸಾಗುತ್ತಾ ಸೀತಾಲಕ್ಷ್ಮಿ ಬಸುರಿಯಾಗಿ ಮಗನೂ ಹುಟ್ಟಿ ಆ ಮಗ ದೊಡ್ಡವನಾಗಿ ಮದುವೆಯ ವಯಸ್ಸಿಗೆ ಬರುವವರೆಗೆ ಹೆಚ್ಚೂಕಡಿಮೆ ಎಲ್ಲವೂ ಸುಸೂತ್ರವಾಗಿತ್ತು. ಮಗ ವಿಶ್ವನಾಥನ ಮದುವೆಯೇ ಸೀತಾಲಕ್ಷ್ಮಿಯ ಬಾಳಿನಲ್ಲೂ ಕೋಲಾಹಲವನ್ನೆಬ್ಬಿಸಿ ಎಲ್ಲವೂ ಅನಿರೀಕ್ಷಿತವೆಂಬಂತೆ ನಡೆದು ಜೀವನದ ಸಂತೆಯಲ್ಲಿ ಅವಳು ಒಂಟಿಯಾಗಿದ್ದಳು.

ತರಗತಿಗಳಲ್ಲಿ ಅವರೇಜ್ ಬುದ್ಧಿವಂತನಾಗಿದ್ದ ವಿಶ್ವನಾಥ ಪಿಯೂಸಿಗೂ ಮೊದಲು ಕಷ್ಟಪಟ್ಟು ಪಾಸಾಗಿದ್ದನಾದರೂ ಪಿಯೂಸಿಯಲ್ಲಿ ಡುಮ್ಕಿ ಹೊಡೆದು ಮತ್ತೆ ಪರೀಕ್ಷೆ ಕಟ್ಟಲಿಲ್ಲ. ಓದು ಅಲ್ಲಿಗೇ ನಿಂತು ಮನೆಯಲ್ಲೇ ಉಳಿದು ತೋಟ ಸುತ್ತಾಡುತ್ತಾ ಕಾಲ ಕಳೆದ. ಹಾಗೆ ಹೆಚ್ಚು ಓದದೇ ಊರಲ್ಲೇ ತೋಟ ನೋಡಿಕೊಂಡಿದ್ದ ಹುಡುಗರನ್ನು ಮದುವೆಯಾಗಲು ಹುಡುಗಿಯರು ಸಿಗದೇ ಸುತ್ತಮುತ್ತ ಊರುಗಳಲ್ಲಿ ಹಲವಾರು ಮದುವೆಯಾಗದ ತರುಣರಿದ್ದರು. ಅವರ ಸಾಲಿಗೆ ವಿಶ್ವನಾಥನೂ ಹೊಸದಾಗಿ ಸೇರಿಕೊಂಡ! ಇಂತಿಪ್ಪ ವಿಶ್ವನಾಥ ಹೈಸ್ಕೂಲಿಗೆ ಹೋಗುತ್ತಿದ್ದಾಗ ಜಿಮ್ನಾಸ್ಟಿಕ್‌ನಲ್ಲಿ ಚುರುಕಿದ್ದು ಜಿಲ್ಲಾಮಟ್ಟದಲ್ಲಿ ಕೆಲವು ಪದಕಗಳನ್ನು ಜಯಿಸಿದ್ದರಿಂದ ಪಿಟಿ ಮಾಸ್ತರರ ಮೆಚ್ಚಿನ ಶಿಷ್ಯನಾಗಿದ್ದ. ಅವರು ತಮ್ಮ ಸ್ಕೂಲಿನಲ್ಲಿ ಕೆಲವು ದಿನಗಳ ಕಾಲ ಮಕ್ಕಳಿಗೆ ತರಬೇತಿ ನೀಡಲು ತಮಗೆ ಸಹಾಯಕನಾಗಿ ಬರಲು ಕೇಳಿಕೊಂಡಿದ್ದರಿಂದ ಖಾಲಿಯಿದ್ದ ವಿಶ್ವನಾಥ ಅಲ್ಲಿಗೆ ಹೋಗಲಾರಂಭಿಸಿದ್ದೇ ಅವನ ಜೀವನದಲ್ಲಿ ದೊಡ್ಡ ತಿರುವು ಬರಲು ಕಾರಣವಾಯಿತು. ಎಸ್.ಎಸ್.ಎಲ್.ಸಿ ಓದುತ್ತಿದ್ದ ಹೇಮಾ ಎನ್ನುವ ಹುಡುಗಿಯೊಡನೆ ಕಣ್ಣು ಕೂಡಿ ಸ್ನೇಹ ಮೂಡಿ ಪ್ರೀತಿಯಲ್ಲಿ ಬಿದ್ದ ವಿಶ್ವನಾಥ ಆ ಹುಡುಗಿಯ ಜಾತಿಯ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ. ಸರಿಯಾದ ಕೆಲಸವಿಲ್ಲದೆ ಕೃಷಿ ಮಾಡುತ್ತೇವೆಂದು ಹೇಳಿಕೊಳ್ಳುತ್ತಾ ಊರಲ್ಲೇ ಓತ್ಲಾ ಹೊಡೆದುಕೊಂಡಿರುತ್ತಿದ್ದ ತನ್ನಂಥ ಹುಡುಗರಿಗೆ ತನ್ನ ಜಾತಿಯಲ್ಲೇ ಹುಡುಗಿ ಸಿಕ್ಕು ಮದುವೆಯಾಗುವುದು ಈ ಜನ್ಮದಲ್ಲಿ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿಯಿದ್ದಿದ್ದರಿಂದ ವಿಶ್ವನಾಥ ಮುಂದುವರೆದು ಆ ಹುಡುಗಿಗೆ ಹದಿನೆಂಟಾಗುತ್ತಿದ್ದಂತೆ ಯಾರಿಗೂ ಹೇಳದೇ ಪಟ್ಟಣದ ದೇವಸ್ಥಾನದಲ್ಲಿ ಮದುವೆಯಾಗಿ ಊರಿಗೆ ಬಂದ. ಊರಿನ ಶಿವನ ದೇವಸ್ಥಾನದಲ್ಲಿ ಆಶೀರ್ವಾದ ಪಡೆದು ಅಪ್ಪ ಅಮ್ಮನನ್ನು ಒಪ್ಪಿಸುವುದು ಅವನ ಮನಸ್ಸಲ್ಲಿತ್ತು. ಆದರೆ ಆಗಿದ್ದೇ ಬೇರೆ! ಚಿದಂಬರ ಭಟ್ಟರ ಮಗ ವಿಶ್ವನಾಥ ತೀರಾ ಕೆಳಜಾತಿಯ ಹುಡುಗಿಯನ್ನು ಮದುವೆಯಾಗಿ ಊರಿಗೆ ಕಾಲಿಟ್ಟ ಸುದ್ದಿ ಕಾಳ್ಗಿಚ್ಚಿನಂತೆ ಇಡೀ ಊರಿಗೆ ಹಬ್ಬಿ ಊರಿನ ಮುಖಂಡರು ದೇವಸ್ಥಾನದ ಬಾಗಿಲಲ್ಲೇ ತಡೆದರು! ಇಂಥದ್ದೊಂದನ್ನು ನಿರೀಕ್ಷಿಸಿರದ ಚಿದಂಬರ ಭಟ್ಟರು 'ನೀನು ನನ್ನ ಮಗನೇ